# ಕೂಡಿಟ್ಟ ಕಾಲವನ್ನು ಹಣಕ್ಕೆ ಬಳಸಿಲ್ಲ



**ನೊಣವಿನಕೆರೆ ರಾಮಕೃಷ್ಣಯ್ಯ**
ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು' ಚಿದಾನಂದ ಮೇಷ್ಟ್ರು

◆ **ವಕೀಲರ ಮೇಷ್ಟ್ರ ಕೆಲಸ ಹೇಗಿದೆ?**

ಮೇಷ್ಟ್ರು ಅಂದ ತಕ್ಷಣ 'ಆಚಾರ್ಯ ದೇವೋ ಭವ' ಎನ್ನುವ ಮಾತು ನೆನಪಿಗೆ ಬರುತ್ತದೆ. ಪೋಷಕರನ್ನು ಬಿಟ್ಟರೆ ನಮ್ಮ ಬದುಕಿನ ನಿರ್ಮಾಣದಲ್ಲಿ ಬಹುಮುಖ್ಯ ಪಾತ್ರವನ್ನು ಗುರುಗಳು ನಿರ್ವಹಿಸಿರುತ್ತಾರೆ. ಪಾತ್ರವಾಗಿ ತೆರೆಯಲ್ಲಿ ನಾನು ಪಾಠ ಹೇಳಿಕೊಡಬಹುದು, ವೈಯಕ್ತಿಕವಾಗಿ ನಾನು ಕಲಿಯುವುದು ಬಹಳ ಇದೆ. ಈ ಸೆಟ್ ಕಲಿಯುವ ಅವಕಾಶವನ್ನು ನನಗೆ ಕೊಟ್ಟಿದೆ. ಕಾನೂನು ವ್ಯಾಪ್ತಿ ತುಂಬ ದೊಡ್ಡದು. ಈಗಲೂ ನ್ಯಾಯವಾದಿಯಾಗಿ ಕೆಲಸ ಮಾಡುತ್ತಿದ್ದೇನೆ. ಸಾಮಾನ್ಯವಾಗಿ ನನ್ನ ಸಹೋದ್ಯೋಗಿಗಳು ಅದನ್ನು ನೋಡಿಕೊಳ್ಳುತ್ತಾರೆ. ನನಗೆ ಮುಖ್ಯ ಅನ್ನಿಸುವ ಕೆಲವೊಂದು ಸಂದರ್ಭ ಮತ್ತು ಪ್ರಕರಣಗಳಿಗೆ ಸಂಬಂಧಿಸಿ ಈಗಲೂ ನ್ಯಾಯಾಲಯಕ್ಕೆ ಹೋಗುತ್ತೇನೆ. ನನ್ನ ಕಾನೂನು ಅರಿವು ಸೆಟ್‌ನಲ್ಲಿಯೂ ಪ್ರಯೋಜನಕ್ಕೆ ಬರುತ್ತಿದೆ. ಅನೇಕರಿಗೆ ಕಾನೂನು ಮಾರ್ಗದರ್ಶನವನ್ನು ನೀಡುತ್ತೇನೆ.

◆ **ಅಧಿಕಾರಿಯಾಗಿ ರಂಗಭೂಮಿ ಪ್ರೇಮವನ್ನು ಹೇಗೆ ಪೋಷಿಸಲು ಸಾಧ್ಯ ಆಯಿತು?**

ಐಟಿಐ ಕಾರ್ಖಾನೆಯಲ್ಲಿ ಇದ್ದಾಗ ನನ್ನ ಬಹುತೇಕ ರಜೆಗಳನ್ನು ವೇತನಕ್ಕಾಗಿ ವಿನಿಯೋಗಿಸದೆ ಅದನ್ನು ರಂಗಭೂಮಿಗೆ ಬಳಸಿಕೊಂಡೆ. ನನ್ನ ಗಳಿಕೆಯ ರಜೆ ಬಳಸಿ ಬರವಣಿಗೆ ನಾಟಕಗಳನ್ನು ಮಾಡಿದೆ. ಕೂಡಿಟ್ಟ ಕಾಲವನ್ನು ಹಣಕ್ಕೆ ಬಳಸದೆ ಕಲೆಗಾಗಿ ಖರ್ಚು ಮಾಡಿದೆ. ಐಟಿಐಯಲ್ಲಿದ್ದಾಗ ನನಗೆ ಆದ ದೊಡ್ಡ ಅನುಕೂಲ ಏನೆಂದರೆ, ಸುಗಮ ಸಂಗೀತ ಕ್ಷೇತ್ರದ ದಿಗ್ಗಜ ಸಿ. ಅಶ್ವತ್ಥ್ ಅವರ ಮಾರ್ಗದರ್ಶನ ಸಿಕ್ಕಿತು. ಅವರ ಗಾಯನಕ್ಕೆ ನೃತ್ಯ ಮಾಡಿದ್ದೇನೆ. ಅದೆಲ್ಲ ರಂಗಭೂಮಿಗೆ ಸಹಾಯ ಆಗಿದೆ. ಮೊದಲಿನಿಂದಲೂ ರಂಗಭೂಮಿಯಲ್ಲಿ ಏನಾದರೂ ಮಾಡಬೇಕು ಎನ್ನುವ ತುಡಿತ ನನ್ನದು. 'ಕೋಮಲ ಗಾಂಧಾರ' ನಾಟಕವನ್ನು ರಚಿಸಿ ನಿರ್ದೇಶನ ಮಾಡಿದ್ದೇನೆ. ಗಾಂಧಿ ಜೀವನಗಾಥೆಯನ್ನು ವಸ್ತುವಾಗಿಟ್ಟುಕೊಂಡು ನಾಟಕ ಬರೆದು ನ್ಯಾಯವಾದಿಗಳಿಂದ ಆ ನಾಟಕವನ್ನು ಆಡಿಸಿದ್ದೇನೆ.

◆ **ಅಭಿನಯ ಜಗತ್ತಿನಲ್ಲಿ ಎಂತಹ ಪಾತ್ರಗಳು ನಿಮ್ಮ ಪ್ರೀತಿಗೆ ಪಾತ್ರವಾಗುತ್ತವೆ?**

ಸಾಮಾನ್ಯವಾಗಿ ಕಲಾವಿದ ಆಗಿ ಎಲ್ಲ ರೀತಿಯ ಪಾತ್ರಗಳನ್ನು ಮಾಡಬೇಕಾಗುತ್ತದೆ. ಇಂತಹ ಪಾತ್ರ ಮಾಡಬೇಕಿತ್ತು ಎಂದು ಮನಸು ಬಯಸಿದರೂ ಭಿಕ್ಷುಕ ಆಗಬಹುದು, ರಾಜನೇ ಆಗಬಹುದು ಯಾವುದಾದರೂ ಮಾಡಬೇಕು. ಏಕವ್ಯಕ್ತಿ ಪ್ರದರ್ಶನಗಳಲ್ಲಿ ನಾನೇ ಭೀಷ್ಮ, ಗಾಂಧಾರಿ.... ಹೀಗೆ ಹಲವು ಪಾತ್ರವಾಗಿ ಕಾಣುತ್ತೇನೆ. ಭಾವ ತುಂಬಿದ ಪಾತ್ರಗಳ ನಿರ್ವಹಣೆ ಅಂದರೆ ಒಂದಿಷ್ಟು ಹೆಚ್ಚು ಪ್ರೀತಿ.

ಸಿನಿಮಾರಂಗ ತುಂಬ ದೊಡ್ಡದು, ದೊಡ್ಡ ದೊಡ್ಡ ನಟರನ್ನು ನೋಡಿದ್ದೇನೆ. ಈಚೆಗೆ ನಾಗೇಂದ್ರ ಜೈನ್ ನಿರ್ದೇಶನದ 'ಗಗನ ಕುಸುಮ'ಕ್ಕೆ ಸಹನಿರ್ದೇಶನ, 'ಋಣ'ದಲ್ಲಿ ಪ್ರಮುಖ ಪಾತ್ರ ಮಾಡಿದ್ದೇನೆ. ಮತದಾನದ ಪ್ರಾಮುಖ್ಯತೆಯನ್ನು ತಿಳಿಸುವ ಸಿನಿಮಾದಲ್ಲಿ ಒಂದು ಪಾತ್ರ ನಿರ್ವಹಿಸಿದ್ದೇನೆ. ಕನ್ನಡ ಸಿನಿಮಾ ಚರಿತ್ರೆಯಲ್ಲಿ 'ಸತ್ಯ ಹರಿಶ್ಚಂದ್ರ'ದಲ್ಲಿ ರಾಜಕುಮಾರ್, 'ಕಸ್ತೂರಿ ನಿವಾಸ'ದಲ್ಲಿ ಕೆ.ಎಸ್. ಅಶ್ವತ್ಥ್ ಅವರ ನಟನೆಯನ್ನು ಮರೆಯಲು ಸಾಧ್ಯವೇ ಇಲ್ಲ. ಜನಮಾನಸದಲ್ಲಿ ದೀರ್ಘಕಾಲ ಉಳಿಯಬಹುದಾದ ಇಂತಹ ಸಿನಿಮಾವನ್ನು ಮಾಡಬೇಕು ಎನ್ನುವ ಆಲೋಚನೆ ಇದೆ. ನೈತಿಕ ಮೌಲ್ಯವನ್ನು ಸ್ವಾತಂತ್ರ್ಯ ಚಳವಳಿಯ ನಾಯಕರನ್ನು ಆಧರಿಸಿ ಚಿತ್ರಕಥೆಯನ್ನು ಬರೆಯಬೇಕು ಎನ್ನುವ ಹಂಬಲವೂ ಇದೆ.

◆ **ಧಾರಾವಾಹಿಯಲ್ಲೂ ಏಕೆ ಕ್ರೈಮ್ ಪ್ರಧಾನ ಆಗುತ್ತಿದೆ?**

ಅನೇಕ ವೀಕ್ಷಕರು ಧಾರಾವಾಹಿಗಳ ಬಗ್ಗೆ ಹೀಗೆ ಆಕ್ಷೇಪಿಸಿ ನನ್ನ ಬಳಿ ಕೂಡ ಮಾತನಾಡಿದ್ದಾರೆ. 'ಬರೀ ಮನೆ ಹಾಳು ಮಾಡುವುದನ್ನು ನಾವೇಕೆ ನೋಡಬೇಕು' ಎಂದು ತಮ್ಮ ಸಿಟ್ಟನ್ನು ತೋಡಿಕೊಂಡಿದ್ದಾರೆ. ಸಾಮಾನ್ಯವಾಗಿ ವೀಕ್ಷಕರು ಬೈಯುತ್ತಾರೆಯೇ ಹೊರತು, ನೋಡುವುದನ್ನು ಮಾತ್ರ ಬಿಡುವುದಿಲ್ಲ. ಅಂದರೆ, ಜನ ಕ್ರೈಮ್ ಕಥೆಯನ್ನು ನಿರಾಕರಿಸಿದರೆ ಅದೆಲ್ಲ ಬರಲ್ಲ. ಅದನ್ನು ಕಾರ್ಯಗತ ಮಾಡಬೇಕಾಗಿರುವುದು ವೀಕ್ಷಕರು. ಆಗಾಗ ಟಾಕೀಸ್‌ಗೆ ಹೋಗಿ ಸಿನಿಮಾ ನೋಡುವ ಅಭ್ಯಾಸ ನನಗಿದೆ. ಮೊದಲೆಲ್ಲ ಒಂದು ಸಿನಿಮಾ ಟಿಕೆಟ್‌ಗಾಗಿ ತಿಂಗಳುಗಟ್ಟಲೆ ಕಾದಿದ್ದೂ ಇದೆ. ಈಗ ಹಾಗಿಲ್ಲ. ಬಿಡುಗಡೆಯಾಗಿ ಮರುದಿನವೇ ಸುಲಭವಾಗಿ ಟಿಕೆಟ್ ಸಿಗುತ್ತದೆ. ಅಷ್ಟಾದರೂ ಟಾಕೀಸ್ ಭರ್ತಿ ಆಗಿರುವುದಿಲ್ಲ.

ಒಳ್ಳೆಯ ಧಾರಾವಾಹಿ ಕೊಡಬೇಕು ನಿಜ. ಅದು ಕಲೆ ಆದರೂ ಉದ್ಯಮ. ಒಂದು ಯಶಸ್ಸನ್ನು ಅನುಸರಿಸುವ ಪದ್ಧತಿ ಯಾವತ್ತೂ ಇದೆ. ಟೀವಿಗಳಲ್ಲೂ ಅದೇ ಆಗುತ್ತಿದೆ. ವೀಕ್ಷಕ ತತ್ವ ಏನೆಂದರೆ 'ತಾವು ಏನು ಮಾಡಲು ಸಾಧ್ಯ ಆಗುವುದಿಲ್ಲವೋ ಅದೆಲ್ಲವನ್ನು ಬೇರೆ ರೂಪದಲ್ಲಿ ಆಗು ಮಾಡಿಕೊಳ್ಳುವ ಮನಸ್ಥಿತಿ ಇರುತ್ತದೆ'. ಹಾಗಾಗಿ ಒಂದು ಗೆಲುವಿನ ಹಿಂದೆ ಉದ್ಯಮ ಸಾಗಿದರೆ, ಅದರಿಂದ ರಂಜನೆ ಪಡೆಯಲು ಪ್ರೇಕ್ಷಕ ಮನಸೂ ಜೊತೆಯಾಗುತ್ತದೆ.

■ **ರಾಘವೇಂದ್ರ ಕೆ.**